# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.353-2014** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ರವೀಶ್ ಎಂ<br>ಹೆಮ್ಮರಗಾಲ ಗ್ರಾಮ,  ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 21-03-2024.** |

**ಮುಂದುವರೆದ ಪಾಟೀ ಸವಾಲುಃ  ಶ್ರೀ ಟಿ.ಎಂ.ಆರ್  ವಕೀಲರಿಂದಃ**

3. ನನ್ನ ಮತ್ತು ಪ್ರತಿವಾದಿಯವರ ನಡುವೆ ಯಾವುದೇ ಹಣಕಾಸಿನ ವ್ಯವಸಾಯ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಮೂದಿಸಲಾಗಿರುವ ವ್ಯವಹಾರವು ನನ್ನ ಮತ್ತು ಮೀನಾ ರವರ ನಡುವೆ ನಡೆದಿರುವ ವ್ಯವಹಾರ ವಾಗಿರುತ್ತದೆಯೇ ಹೊರತು ನನ್ನ ಮತ್ತು ಪ್ರತಿವಾದಿಯ ನಡುವೆ ಆದ ವ್ಯವಹಾರ ಅಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಮೀನಾ ರವರ ನಡುವೆ ನಡೆದಿದ್ದ ಹಣಕಾಸಿನ ವ್ಯವಹಾರದ ಬಾಬ್ತು ಶೇ.75% ರಷ್ಟು ಹಣವನ್ನು ಮೀನಾ ರವರು ನನಗೆ ಸಂದಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ವ್ಯವಹಾರ ನಡೆಯದೇ ಇದ್ದರೂ ಸಹ ನಿಪಿ-1 ಅನ್ನು ಬರೆಯುವ ವೇಳೆ ಮೀನಾ ರವರನ್ನು ಸಾಕ್ಷಿದಾರರನ್ನಾಗಿ ಮಾಡಿ ಪ್ರತಿವಾದಿಯ ಹೆಸರಿನಲ್ಲಿ ದಾಖಲೆಯನ್ನು ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯನ್ನು ಸಾಕ್ಷಿದಾರರಾಗಿ ಸಹಿ ಮಾಡುವಂತೆ ಕರೆದು ನಿಪಿ-1 ಅನ್ನು ಅವರ ಹೆಸರಿನಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೀನಾ ರವರಿಗೆ ನೀಡಿರುವ ಹಣವನ್ನ ಸಂದಾಯ ಮಾಡಿರುವ ಬಾಬ್ತು ನನ್ನಿಂದ ದಾಖಲೆಯನ್ನು ಬರೆಸಿಕೊಂಡಿರುತ್ತಾರೆ

ಎಂದರೆ ಸರಿಯಲ್ಲ. ನಾನು ಪತ್ರಬರಹಗಾರರೊಂದಿಗೆ ಶರೀಕಾಗಿ ಪ್ರತಿವಾದಿಯವರು ಹಣ ಸಂದಾಯ ಮಾಡುವಂತೆ ಪತ್ರವನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**